**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿ/ಶೈ.ಶಾ.06/IGNITE/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ 18ನೇ ಅಡ್ಡ ರಸ್ತೆ,
ಬೆಂಗಳೂರು-12.
ದಿನಾಂಕ 12-06-2014.

**ಸುತ್ತೋಲೆ**

ವಿಷಯ: IGNITE 2014 a nationwide compaign by NIF to harness the creative And innovative spirit of school children to generate solutions Problems all aroundರ ಬಗ್ಗೆ

ಉಲ್ಲೇಖ: ಡಾ:ವಿಪಿನ್ ಕುಮಾರ್, ಡೈರಕ್ಟರ್ ಅಂಡ್ ಚೀಫ್ ಇನ್ನೋವೇಷನ್ ಆಫೀಸರ್, ನ್ಯಾಷನಲ್ ಇನ್ನೋವೇಷನ್ ಫೌಂಡೇಷನ್ – ಇಂಡಿಯಾ, ವಿಜ್ಞಾನ ಮತ್ತು ಸಂಶೋಧನಾ ಇಲಾಖೆ, ನವದೆಹಲಿ, ಇವರ ಪತ್ರ ಸಂಖ್ಯೆ : ಎನ್ಐಎಫ್/ ಎಸ್ಅಂಡ್ಡಿ/ IGNITE 14/76698 ದಿನಾಂಕ 15-05-2014.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ 12ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲಿ ನಡೆಯುವ IGNITE-2014 ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳ ಗಮನ ಸೆಳೆಯಲು ಕೋರಿರುತ್ತಾರೆ.

ರಾಷ್ಟ್ರಮಟ್ಟದಲ್ಲಿ ನಡೆಯುವ IGNITE-2014 ಸ್ಪರ್ಧೆಯಲ್ಲಿ ನೋಂದಾಯಿಸಲು ಕೊನೆಯ ದಿನಾಂಕ **31-08-2014**. IGNITE-2014 ಪ್ರಶಸ್ತಿಯನ್ನು ರಾಷ್ಟ್ರದ ಹಿಂದಿನ ರಾಷ್ಟ್ರಪತಿಗಳಾದ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ರವರ ಜನ್ಮ ದಿನಾಂಕದಂದು Children's Creativity and Innovation Day by NIF ಎಂದು ಆಚರಿಸಲಾಗುವುದು ಎಂದೂ, ತದನಂತರ ಪ್ರಶಸ್ತಿಗಳನ್ನು ಡಾ. ಅಬ್ದುಲ್ ಕಲಾಂ ರವರು ಸ್ವತಃ ವಿತರಿಸುತ್ತಾರೆಂದು ತಿಳಿಸಲಾಗಿದೆ. ಸದರಿ ಸ್ಪರ್ಧೆಯಲ್ಲಿ ಭಾಗವಹಿಸುವ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಅಂಚೆ ಮೂಲಕ ಅಥವಾ ignite@nifindia.org ರಲ್ಲಿ ನೇರವಾಗಿ ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಯನ್ನು http://www.nif.org.in/ignite/ ರಲ್ಲಿ ಪಡೆಯಲು ತಿಳಿಸಿರುತ್ತಾರೆ.

ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ರಾಷ್ಟ್ರಪತಿ ಭವನದಲ್ಲಿ ನೆರವೇರಲಿರುವ "ವಾರ್ಷಿಕ ಸಂಶೋಧನಾ ಪ್ರದರ್ಶನ – ಎನ್ಐಎಫ್" ಹಾಗೂ ಇತರ ರಾಷ್ಟ್ರೀಯ ಮಾಧ್ಯಮಗಳ ಮೂಲಕ ಪ್ರಕಟಿಸಲಾಗುವುದು ಹಾಗೂ ವಿಜೇತರ ಹೆಸರುಗಳನ್ನು ರಾಷ್ಟ್ರ ಮಟ್ಟದಲ್ಲಿ ಪೇಟೆಂಟ್‌ಗಾಗಿ ಅರ್ಜಿಯನ್ನು ಎನ್ಐಎಫ್ ಸಂಸ್ಥೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪಿಸುವುದಲ್ಲದೆ, ಹಲವಾರು ಸಂದರ್ಭದಲ್ಲಿ ಸದರಿ ಪ್ರಶಸ್ತಿಗಳನ್ನು ಸನ್ಮಾನ್ಯ ಭಾರತದ ರಾಷ್ಟ್ರಪತಿಗಳು ವಿತರಿಸುತ್ತಾರೆಂದು ತಿಳಿಸಲಾಗಿದೆ.

ವಿದ್ಯಾರ್ಥಿಗಳು ತಮ್ಮ ಹೊಸ ಕ್ರಿಯಾತ್ಮಕ, ವೈಜ್ಞಾನಿಕ ಹಾಗೂ ಸಂಶೋಧನೆಗಳನ್ನು (ತಮ್ಮ ಬೋಧಕರು/ಪೋಷಕರು ಗೈಡ್ ಮಾಡಿದ್ದನ್ನು ಹೊರತುಪಡಿಸಿ) ಕಳುಹಿಸಿಕೊಡಲು ಅವಕಾಶವಿದೆ.

ಆದ್ದರಿಂದ, ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಹೊಸ ಕ್ರಿಯಾತ್ಮಕ, ವೈಜ್ಞಾನಿಕ ಹಾಗೂ ಸಂಶೋಧನೆಗಳೊಂದಿಗೆ ಸಕ್ರಿಯವಾಗಿ IGNITE-2014 ರಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕೆಂದು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಕೋರಬೇಕೆಂದು ತಮಗೆ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳನ್ನು ಸೂಕ್ತ ಕ್ರಮಕ್ಕಾಗಿ:

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲ ಜಿಲ್ಲಾ ಉಪನಿರ್ದೇಶಕರಿಗೆ
2. ಜಂಟಿ ನಿರ್ದೇಶಕರು(ಆಡಳಿತ/ಪರೀಕ್ಷೆ
3. ಇ-ಆಡಳಿತ ಶಾಖೆಗೆ – ವೆಬ್ ಸೈಟ್ ನಲ್ಲಿ ಅಳವಡಿಸಲು
4. ನಿರ್ದೇಶಕರ ಆಪ್ತಶಾಖೆಗೆ – ಮಾಹಿತಿಗಾಗಿ
5. ಕಛೇರಿ ಪ್ರತಿ